







ಖಲೀಜ್ ಫೀಸೆಂಟ್



ಜಿಂಕೆ

ಕಾಜಿರಂಗ ಬರೀ ಖಡ್ಗಮೃಗ ಮಾತ್ರವಲ್ಲ, ಇನ್ನೂ ಹಲವು ಅಪರೂಪದ ಪ್ರಾಣಿಗಳ ವಾಸಸ್ಥಾನ. ಚಳಿಗಾಲದಲ್ಲಿ ಚುಕ್ಕೆ ಕೊಕ್ಕಿನ ಬಕ ಇಲ್ಲಿ ಗೂಡು ಮಾಡುವುದಕ್ಕೆ ಪ್ರತ್ಯೇಕ ಕಾಲೊನಿಯೇ ಇದೆ. ಅತಿ ಅಪರೂಪದ ಏಷ್ಯಾದ ಕಾಡೆಮ್ಮೆ, ತೇವಾಂಶ ಪ್ರದೇಶದ ಜಿಂಕೆ, ಖಲೀಜ್ ಫೀಸೆಂಟ್ ಅಲ್ಲದೆ ವಿನಾಶದ ಅಂಚಿನಲ್ಲಿರುವ 6 ಬಗೆಯ ಮಂಗಟ್ಟೆ ಹಕ್ಕಿಗಳೂ ಇಲ್ಲಿ ಕಾಣಸಿಗುತ್ತವೆ. ಏಪ್ ಜಾತಿಗೆ ಸೇರಿದ ಭಾರತದ ಏಕೈಕ ಪ್ರಬೇಧ ಹೂಲಾಕ್ ಗಿಬ್ಬನ್ ಕೂಡಾ ಇಲ್ಲಿ ಕಾಣಸಿಗುವ ಅಪರೂಪದ ವನ್ಯಜೀವಿ.

ಕಾಜಿರಂಗದ ಸುಂದರ ಪ್ರಾಕೃತಿಕ ವಾತಾವರಣ ಖಡ್ಗಮೃಗಗಳ ಉಳಿವಿಗೆ ಸಾಥ್ ನೀಡುತ್ತಿದೆ. ಆದರೆ ಅಷ್ಟಾಗಿಯೂ ಇವುಗಳ ಸಂತತಿ ಇಳಿಮುಖವಾಗಿರುವುದು ಗಮನಾರ್ಹ ಸಂಗತಿ. ಇದು ಜಗತ್ತಿನಾದ್ಯಂತ ನಡೆಯುತ್ತಿರುವ ವಿದ್ಯಮಾನ. ಖಡ್ಗಮೃಗಗಳ ಸಂತತಿಯನ್ನು ಉಳಿಸುವ ಬಗ್ಗೆ ಜಗತ್ತಿನಾದ್ಯಂತ ಪ್ರಯತ್ನಗಳು ನಡೆದಿವೆ. 2010ರ ಸೆಪ್ಟೆಂಬರ್ 22ರಂದು ಆಫ್ರಿಕಾದಲ್ಲಿ ಖಡ್ಗಮೃಗಗಳ ಬಗ್ಗೆ ಆಸಕ್ತಿ ಮೂಡಿಸಲು ಮೊತ್ತ ಮೊದಲ ಬಾರಿಗೆ 'ಖಡ್ಗಮೃಗ ದಿನಾಚರಣೆ' ಆಚರಿಸಲಾಯಿತು. ಈಗ ಇದೇ 22ರಂದು ನಮ್ಮಲ್ಲೂ ಖಡ್ಗಮೃಗ ದಿನಾಚರಣೆ ಯನ್ನು ರೂಪಿಸಿದ್ದು ಇವುಗಳ ಬಗ್ಗೆ ಆಸಕ್ತಿ ಬೆಳೆಸಿ ಸಂತತಿ ರಕ್ಷಿಸುವ ಪ್ರಯತ್ನ ನಡೆಯುತ್ತಿದೆ.

ಖಡ್ಗಮೃಗದ ಉಳಿವಿಗಾಗಿ ಅಸ್ಸಾಂ ಗಡಿಯಲ್ಲಿ ಇನ್ನೂ ಹೆಚ್ಚಿನ ಭದ್ರತಾ ಕ್ರಮಗಳನ್ನು ಕೈಗೊಂಡು ಕಳ್ಳಬೇಟೆ ತಡೆ ಶಿಬಿರ ಸಂಖ್ಯೆಯನ್ನು ಹೆಚ್ಚಿಸಬೇಕಿದೆ. ವಿಶ್ವ ಖಡ್ಗಮೃಗಗಳ ದಿನಾಚರಣೆಯ ಈ ಸಂದರ್ಭದಲ್ಲಿ ನಾವೂ ಖಡ್ಗಮೃಗಗಳ ಕುರಿತು ಹೆಚ್ಚಿನ ಮಾಹಿತಿಗಳನ್ನು ಹಂಚಿಕೊಳ್ಳುವ ಅಗತ್ಯವಿದೆ. ಅಪರೂಪದ ವನ್ಯಮೃಗಗಳು ಕಣ್ಮರೆಯಾದರೆ ಜೀವವೈವಿಧ್ಯತೆಯ ಕೊಂಡಿಯೊಂದು ಕಳಚಿದಂತೆಯೇ.